ಈ) ಸದರಿ ಶಾಸನದಡಿಯಲ್ಲಿ ಉಲ್ಲಂಘಿಸಿದ ಪ್ರಕರಣಗಳು ಕಾರ್ಮಿಕ ಇಲಾಖೆಯ ಗಮನಕ್ಕೆ ಬಂದಾಗ ಅಂತಹ ಮಾಲೀಕರ ಮೇಲೆ ಸೂಕ್ತ ಕ್ರಮಕೈಗೊಳ್ಳಲಾಗುತ್ತಿದೆ. 1992ನೇ ಸಾಲಿನಲ್ಲಿ 59,882 ಮಾಲೀಕರ ಮೇಲೆ ಮೊಕದ್ದಮೆ ಹೂಡಲಾಗಿದೆ.

ಉ) ಈ ವರ್ಗದ ನೌಕರರಿಗೆ ಕನಿಷ್ಠ ವೇತನವನ್ನು ಸರ್ಕಾರವು ನಿಗದಿಪಡಿಸಿದೆ.

ಅಧ್ಯಕ್ಷರು : ಪಟ್ಟಿಗಳನ್ನು ಮಂಡಿಸಲಾಯಿತು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಯವರ ಹೆಸರಿನಲ್ಲಿರುವ ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

1. 1991-92ನೇ ಸಾಲಿನ ಧನವಿನಿಯೋಗ ಲೆಕ್ಕಪತ್ರಗಳು.

2. 1991-92ನೇ ಸಾಲಿನ ಹಣಕಾಸು ಲೆಕ್ಕಪತ್ರಗಳು, ಹಾಗೂ

3. 1992ನೇ ಇಸವಿಯ ಮಾರ್ಚ್ 31ರಂದು ಕೊನೆಗೊಂಡ ವಾರ್ಷಿಕದ ಬಗ್ಗೆ ನಿಯಂತ್ರಕ ಹಾಗೂ ಮಹಾಲೇಖ ಪರೀಕ್ಷಕರವರ ವರದಿ (ನಂ.3 ಸಿವಿಲ್)

ಅಧ್ಯಕ್ಷರು.- ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು

1. ಶ್ರೀ ಮೊಡಗೇಕರ್ ದೇಸಾಯಿ : ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಕಂಡ ಅರ್ಜಿಗಳನ್ನು ಸಭೆಯ ಮುಂದೆ ಒಪ್ಪಿಸುತ್ತಿದ್ದೇನೆ:
   ಅ) ಹುದಲಿಯಲ್ಲಿ ಪೋಲೀಸ್ ಠಾಣೆ ತೆರೆಯುವ ಬಗ್ಗೆ
   ಆ) ಕಾಮಸಿನಕೊಪ್ಪಕ್ಕೆ ಮಲಪ್ರಭಾ ನದಿಯಿಂದ ಸಣ್ಣ ನೀರಾವರಿ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ.
2. ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಪಿ.ಜಿ.ಆರ್. ಸಿಂಧ್ಯಾ ಅವರ ಹೆಸರಿನಲ್ಲಿರುವ ಶ್ರೀ ಅನಂತಪ್ಪ, ಪೋಲೀಸ್ ಪೇದೆ ಇವರ ಪುನರ್ ನೇಮಕ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.
3. ಶ್ರೀ ಎಸ್. ರುದ್ರಪ್ಪ : ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಅರ್ಜಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.
   ಅ) ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ದೇವಿಹಳ್ಳಿ ಗ್ರಾಮಕ್ಕೆ ಚರಂಡಿ ಮಂಜೂರಾತಿ ಬಗ್ಗೆ.
4. ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಕಂಡ ಅರ್ಜಿಗಳನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.
   ಅ) ಬೆಂಗಳೂರು ಮಹಾನಗರ ಪಾಲಿಕೆಯಿಂದ ನಾಗರೀಕ ಸೌಲಭ್ಯಗಳಾದ ಕುಡಿಯುವ ನೀರು ಮತ್ತು ಡಾಂಬರು ರಸ್ತೆಗಳಿಲ್ಲದೆ ಎರಡನೇ ಮುಖ್ಯರಸ್ತೆ, ಗೋವಿಂದ ರಾಜ ನಗರ, ಸೈಡ್ ಆಫ್ ನಾಗರಬಾವಿ ರಸ್ತೆ, ಬೆಂಗಳೂರು-40 ಇದರ ನಾಗರೀಕರು ವಂಚಿತರಾಗಿರುವ ಬಗ್ಗೆ
   ಆ) ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿಗೆ ನಾಟಿ ರೇಷ್ಮೆ ಮೊಟ್ಟೆಯನ್ನು ಒದಗಿಸುವ ಬಗ್ಗೆ.